ಆ, ಇ. ಈ) ಈ ಪ್ರವಾಸಿ ಮಂದಿರ ಸುಸ್ಥಿತಿಗೆ ತರಲು ಅಂದಾಜು ರೂ.15.00 ಲಕ್ಷ (ನವೀಕರಣ ಹಾಗೂ ರಸ್ತೆ ಕಾಮಗಾರಿ ಸೇರಿ) ಬೇಕಾಗುವುದು. ಬಿಜಾಪುರ ವಿಭಾಗದಿಂದ ಪ್ರಸ್ತಾವನೆಯನ್ನು ಪಡೆದು ನಂತರ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

1400 (1801) ಶ್ರೀ ವಿ.ಸೋಮಣ್ಣ ಮತ್ತು ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಬ್ಯಾಂಕ್‌ಗಳಲ್ಲಿ ಸ್ಟ್ಯಾಂಪ್ ಪೇಪರ್ (ಛಾಪಾ ಕಾಗದ)ಗಳನ್ನು ಮಾರಾಟ ಮಾಡಲಾಗುತ್ತಿದೆ;

ಆ) ಪ್ರತಿಯೊಂದು ಬ್ಯಾಂಕುಗಳ ಮುಂದೆ ನೂರಾರು ಜನರು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ನಾಗರೀಕರಿಗೆ ವಿಳಂಬವಿಲ್ಲದೆ ಛಾಪಾ ಕಾಗದ ದೊರಕುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಬ್ಯಾಂಕುಗಳಲ್ಲಿ ಮಾರಾಟವಾಗುವ ಛಾಪಾ ಕಾಗದಗಳಲ್ಲಿ ನಕಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;

ಊ) ಮಹಾರಾಷ್ಟ್ರ, ಗುಜರಾತ್ ಮತ್ತು ದೆಹಲಿ ರಾಜ್ಯಗಳಲ್ಲಿ ಇ–ಸ್ಟ್ಯಾಂಪಿಂಗ್ ಪದ್ಧತಿ ಜಾರಿಗೆ ತಂದಿರುವ ರೀತಿಯಲ್ಲಿ ಇಲ್ಲೂ ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ದಿನಾಂಕ : 1/4/2003 ರಿಂದ ಸ್ಟ್ಯಾಂಪ್ ಪೇಪರ್‌ಗಳ ಬಳಕೆ ಇರುವುದಿಲ್ಲ. ಆದರೆ, ಸಾರ್ವಜನಿಕ ಹಿತದೃಷ್ಟಿಯಿಂದ ಐಚ್ಛಿಕವಾಗಿ ನೋಂದಾಯಿಸಲ್ಪಡುವ ದಸ್ತಾವೇಜುಗಳ ಬಳಕೆಗಾಗಿ Pre Certified Document Sheet ಗಳನ್ನು ಸ್ಟೇಟ್

ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಹಾಗೂ ಕಾರ್ಪೋರೇಷನ್ ಬ್ಯಾಂಕುಗಳು ಮುದ್ರಿಸಿ ವಿತರಿಸುತ್ತಿವೆ.

ಆ) ಹೌದು.

ಇ) ಎ) ಮೇಲೆ ಹೆಸರಿಸಿರುವ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳ ಶಾಖೆಗಳಲ್ಲಿ ಪ್ರಮಾಣೀಕರಿಸಿದ ದಸ್ತಾವೇಜು ಹಾಳೆಗಳನ್ನು ವಿತರಿಸುವ ವ್ಯವಸ್ಥೆ ಮಾಡುವಂತೆ ಬ್ಯಾಂಕುಗಳಿಗೆ ಸೂಚನೆ ನೀಡಲಾಗಿದೆ.

ಬಿ) ಇ-ಸ್ಟ್ಯಾಂಪಿಂಗ್ ಮೂಲಕ ಮುದ್ರಾಂಕ ತುಂಬುವ ವಿನೂತನ ಕ್ರಮ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ನೆರೆಯ ರಾಜ್ಯಗಳಲ್ಲಿರುವಂತೆ ಇ-ಸ್ಟ್ಯಾಂಪಿಂಗ್ ಪದ್ಧತಿಯನ್ನು ಕರ್ನಾಟಕದಲ್ಲಿಯೂ ಸಹ ಜಾರಿಗೆ ತರಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1401 (1802) ಶ್ರೀ ಸೋಮಣ್ಣ ವಿ. (ಬನ್ನಿಪೇಟೆ) :- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುವರ್ಣ ಕಾಯಕ ಉದ್ಯೋಗ ತರಬೇತಿ ಯೋಜನೆಯಡಿಯಲ್ಲಿ ಪ್ರತಿ ಅಭ್ಯರ್ಥಿಗೆ ತರಬೇತಿ ಅವಧಿಯಲ್ಲಿ ಸರ್ಕಾರ ಹಾಗೂ ಸಂಬಂಧಪಟ್ಟ ಕಾರ್ಖಾನೆಗಳು ನೀಡುವ ಸ್ಟೈಫಂಡ್ ಹಣವೆಷ್ಟು;

ಆ) ಈ ಯೋಜನೆಯಲ್ಲಿ ಕಾರ್ಖಾನೆಗಳು ಸ್ಟೈಫಂಡ್ ನೀಡಬೇಕಾಗಿರುವುದರಿಂದ ಅಭ್ಯರ್ಥಿಗಳನ್ನು ತೆಗೆದುಕೊಳ್ಳಲು ಹೆಚ್ಚು ಆಸಕ್ತಿ ತೋರಿಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;